# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 541(467)
ಸದಸ್ಯರ ಹೆಸರು : ಶ್ರೀ ಶಿವಕುಮಾರ್.ಕೆ
ಉತ್ತರಿಸಬೇಕಾದ ದಿನಾಂಕ : 11.12.2025
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ಕಾವೇರಿ ಕೊಳ್ಳದ ಯೋಜನೆಗಳಲ್ಲಿ ಕಾವೇರಿ ನ್ಯಾಯಾಧೀಕರಣದಿಂದ ಹಂಚಿಕೆಯಾಗಿರುವ ಅಚ್ಚುಕಟ್ಟು ಪ್ರದೇಶಗಳಲ್ಲಿ ಸುಮಾರು 3 ಲಕ್ಷ ಎಕರೆಗಿಂತಲೂ ಹೆಚ್ಚಿನ ಪ್ರದೇಶವನ್ನು ಸೃಜಿಸಲಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಕರ್ನಾಟಕ ರಾಜ್ಯದಲ್ಲಿನ ಕಾವೇರಿ ಕೊಳ್ಳದಲ್ಲಿ ಒಟ್ಟು 04 ಬೃಹತ್ ನೀರಾವರಿ ಯೋಜನೆಗಳು, 18 ಮಧ್ಯಮ ನೀರಾವರಿ ಯೋಜನೆಗಳು ಮತ್ತು 23 ಅಣೆಕಟ್ಟು ನಾಲೆಗಳು ಇದ್ದು, ಕಾವೇರಿ ನ್ಯಾಯಾಧೀಕರಣದಂತೆ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ ನಿಗದಿಯಾದ 15.55 ಲಕ್ಷ ಎಕರೆ ಅಚ್ಚುಕಟ್ಟು ಪ್ರದೇಶದ ಪೈಕಿ ಈವರೆಗೆ 14.29 ಲಕ್ಷ ಎಕರೆ ಅಚ್ಚುಕಟ್ಟು ಪ್ರದೇಶ ಸೃಜಿಸಲಾಗಿದೆ.<br><br>ಉಳಿದಂತೆ, ಹೇಮಾವತಿ ಯೋಜನೆ ಅಡಿಯಲ್ಲಿ 0.94 ಲಕ್ಷ ಎಕರೆ ಅಚ್ಚುಕಟ್ಟು ಪ್ರದೇಶವು ನಗರೀಕರಣ ಹಾಗೂ ಎತ್ತರ ಪ್ರದೇಶವಾಗಿರುತ್ತದೆ. ಯಗಚಿ ಯೋಜನೆಯ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ನಗರೀಕರಣ ಹೊರತುಪಡಿಸಿ ಬಾಕಿ ಉಳಿದಿರುವ 0.23 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಕಲ್ಪಿಸುವ ಕುರಿತು ವಿತರಣಾ ನಾಲೆ ಹಾಗೂ ಶಾಖಾ ನಾಲೆಗಳಿಗಾಗಿ ಜಮೀನು ಭೂಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ. ಸದರಿ ಪ್ರಕ್ರಿಯೆ ಪೂರ್ಣಗೊಂಡ ನಂತರ ನಾಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಬಾಕಿ ಉಳಿದ ಹೊಲಗಾಲುವೆ ನಿರ್ಮಾಣ ಮಾಡಿ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಕಲ್ಪಿಸಲು ಕ್ರಮವಹಿಸಲಾಗುತ್ತಿದೆ. |
| (ಆ) | ಇದರಿಂದಾಗಿ ರೈತರಿಗೆ ವಂಚನೆ ಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | |
| (ಇ) | ಈ ಪ್ರದೇಶವನ್ನು ಸೃಜಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | |

ಸಂ : ಜಸಂಇ 81 ಎನ್‌ಎಲ್‌ಎ 2024

**(ಡಿ.ಕೆ. ಶಿವಕುಮಾರ್)**
**ಉಪ ಮುಖ್ಯಮಂತ್ರಿ**